# ಆ.5ರಂದು ಮಕ್ಕಳ ಸಾಹಿತ್ಯಾಭಿರುಚಿ ವಿಚಾರ ಸಂಕಿರಣ

ಬೆಂಗಳೂರು, ಆ.1: ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಥಮ್ ಬುಕ್ಸ್ ಹಾಗೂ ಜೈನ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಆ. 5, 6ರಂದು ಮಕ್ಕಳಲ್ಲಿ ಉತ್ತಮ ಸಾಹಿತ್ಯಾಭಿರುಚಿ ಬೆಳೆಸುವ ಕುರಿತು ವಿಚಾರ ಸಂಕಿರಣವನ್ನು ನಗರದ ಜೈನ್ ವಿಶ್ವವಿದ್ಯಾಲಯದ ಸೆಮಿನರ್ ಹಾಲ್‌ನಲ್ಲಿ ಆಯೋಜಿಸಲಾಗಿದೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಚಂದ್ರಶೇಖರ ಕಂಬಾರ ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದಾರೆ. ಹಿರಿಯ ಕವಿ ಸಿದ್ದಲಿಂಗಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಹಿರಿಯ ಸಾಹಿತಿಗಳಾದ ಎಚ್.ಎಸ್.ವೆಂಕಟೇಶಮೂರ್ತಿ, ಎ.ವಿ.ನಾವಡ, ನಾಗೇಶ್ ಹೆಗಡೆ, ಎಸ್.ಆರ್.ವಿಜಯಶಂಕರ್, ಎಂ.ಎಸ್.ಶ್ರೀರಾಮ್, ಚ.ಹ.ರಘುನಾಥ, ಕೊಳ್ಳೇಗಾಲ ಶರ್ಮ, ಟಿ.ಜಿ.ಶ್ರೀನಿಧಿ, ಶಶಿ ಸಂಪಳ್ಳಿ, ಶಿವಾನಂದ ಹೊಂಬಳ, ಹರ್ಷವರ್ಧನ್ ಸುಳ್ಯ, ವಸಂತ ನಾಡಿಗೇರ, ಭಾರ್ಗವಿ ಮೊದಲಾದವರು ವಿಚಾರ ಸಂಕಿರಣದಲ್ಲಿ ಮಾತನಾಡಲಿದ್ದಾರೆ ಎಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ.